ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದು ನಿಜ. ಆದರೆ ಅಲ್ಲಿ ಪೊಟೆನ್ಷಿಯಲ್ ಏನಿದೆ, ಅದು ಯಾವ ಸ್ಟೇಜ್‌ನಲ್ಲಿದೆ ಎಂಬುದು ನನಗೆ ನೆನಪು ಇಲ್ಲ. ಈ ಸಂಜೆ ನಾನು ಕೆ.ಐ.ಡಿ.ಬಿಯವರೊಡನೆ ರಿವ್ಯೂ ಮಾಡುತ್ತಿದ್ದೇನೆ. ಆ ಸಮಯದಲ್ಲಿ ಇದರ ಬಗ್ಗೆ I will take up this issue.

ವಿಷಯ: ಚಿತ್ರದುರ್ಗದಲ್ಲಿ ಕುಡಿಯುವ ನೀರಿನ ಅಭಾವ

489 (3627)

ಶ್ರೀ ಎನ್.ವೈ.ಗೋಪಾಲಕೃಷ್ಣ (ಮೊಳಕಾಲ್ಮೂರು): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿತ್ರದುರ್ಗ ಟೌನ್‌ನಲ್ಲಿ ಕುಡಿಯುವ ನೀರಿನ ಅಭಾವ ತಲೆದೋರಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು?

ಇ) ಈ ಟೌನಿಗೆ ಕುಡಿಯುವ ನೀರಿನ ಸಮಸ್ಯೆಯನ್ನು ಶಾಶ್ವತವಾಗಿ ನೀಗಿಸಲು ಸರ್ಕಾರವು ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಬಿ.ಎಸ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):

ಅ) ಚಿತ್ರದುರ್ಗ ಟೌನಿನ ಕೆಲವು ಪ್ರದೇಶಗಳಲ್ಲಿ ನೀರಿನ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) 1. ಹಾಲಿ ಜಲಶುದ್ಧೀಕರಣ ಕೇಂದ್ರ ಹಾಗೂ ಮಧ್ಯಂತರ ನೀರು ಸರಬರಾಜು ಕೇಂದ್ರದಲ್ಲಿರುವ ಸಂಪುಗಳ ಸಾಮರ್ಥ್ಯ ಕಡಿಮೆಯಾಗಿರುವುದರಿಂದ ಒಂದು 320 ಮತ್ತು ಒಂದು 280 ಅಶ್ವಶಕ್ತಿಯ ಪಂಪುಗಳನ್ನು ಮಾತ್ರ ಕ್ರಮವಾಗಿ ಹೊಸದಾಗಿ ಬದಲಾವಣೆ ಮಾಡಲು 1996-97ನೇ ಸಾಲಿನ ಬರಪರಿಹಾರ ನಿಧಿಯಲ್ಲಿ ರೂ.7.5ಲಕ್ಷಗಳ ಅಂದಾಜಿನಡಿಯಲ್ಲಿ ಕೆಲಸವನ್ನು ತೆಗೆದುಕೊಳ್ಳಲಾಗಿದ್ದು, ಏಜೆನ್ಸಿ ನಿಗಧಿಪಡಿಸಲಾಗಿದ್ದು, 1997ರ ಅಕ್ಟೋಬರ್ ಅಂತ್ಯಕ್ಕೆ ಮುಗಿಸಲಾಗುವುದು.

2. ಚಿತ್ರದುರ್ಗ ನಗರದ ವಿವಿಧ ಬಡಾವಣೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಲು ಒಟ್ಟು 90 ಕೊಳವೆ ಬಾವಿಗಳನ್ನು 1995-96, 1996-97 ಮತ್ತು 1997-98ನೇ ಸಾಲಿನ ಅಭಾವ ಪರಿಹಾರ ನಿಧಿಯಡಿಯಲ್ಲಿ ಕೊರೆದು ಪಂಪು ಅಳವಡಿಸಲು ಒಟ್ಟು ರೂ.40.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ಎಲ್ಲಾ ಕೆಲಸಗಳನ್ನು ನಗರಸಭೆ ಮತ್ತು ಜಲಮಂಡಳಿಯತಿಯಿಂದ ನಿರ್ವಹಿಸಿ ನೀರಿನ

ಸಮಸ್ಯೆಯನ್ನು ಬಹಳಷ್ಟು ಮಟ್ಟಿಗೆ ಪರಿಹರಿಸಲಾಗಿದೆ.

3. ಚಿತ್ರದುರ್ಗ ನಗರ ನೀರು ಸರಬರಾಜು ಯೋಜನೆಯಡಿ, ಶುದ್ಧೀಕರಣಗಾರ ಕೇಂದ್ರಕ್ಕೆ ಕಚ್ಚಾನೀರನ್ನು ಪಂಪು ಮಾಡಲು 100 ಅಶ್ವಶಕ್ತಿಯ ಎರಡು ಪಂಪು ಮತ್ತು ಮೋಟಾರನ್ನು ಜಾಕವೆಲ್ ಮತ್ತು ಪಂಪು ಹೌಸ್‌ನಲ್ಲಿ ಅಳವಡಿಸಲು 9.50 ಲಕ್ಷಗಳನ್ನು 1994-95ನೇ ಸಾಲಿನ ಅಭಾವ ಪರಿಹಾರ ನಿಧಿಯಡಿ ಬಿಡುಗಡೆ ಮಾಡಲಾಗಿತ್ತು. ಸದರಿ ಕೆಲಸವನ್ನು ಪೂರ್ಣ ಗೊಳಿಸಲಾಗಿದ್ದು, 2.00 ದಶಲಕ್ಷ ಗ್ಯಾಲನ್ ಕಚ್ಚಾ ನೀರನ್ನು ಪ್ರತಿ ದಿನ ಶುದ್ಧೀಕರಣಗಾರ ಕೇಂದ್ರಕ್ಕೆ ಪಡೆಯಲಾಗುತ್ತಿದೆ.

ಇ) ಚಿತ್ರದುರ್ಗ ನಗರದ ಮುಂದಿನ 20 ವರ್ಷಗಳಿಗೆ ನಿರೀಕ್ಷಿಸಲಾದ ಜನಸಂಖ್ಯೆಗೆ ಅನುಗುಣವಾಗಿ ಶಾಶ್ವತವಾದ 2ನೇ ಹಂತದ ಕುಡಿಯುವ ನೀರು ಸರಬರಾಜು ಯೋಜನೆಯನ್ನು ಸಂತೆಬೆನ್ನೂರು ಗ್ರಾಮದ ಬಳಿಯಲ್ಲಿ ಹರಿಯುವ ಭದ್ರಾ ಎಡದಂತೆ ಕಾಲುವೆಯ ನೀರನ್ನು ಪಡೆದು ಪ್ರತಿ ದಿನ 4.50 ದಶಲಕ್ಷ ನೀರನ್ನು ಸರಬರಾಜು ಮಾಡುವ ಯೋಜನೆಯನ್ನು ರೂ.69.00 ಕೋಟಿಗೆ ಒಂದು ಅಂದಾಜನ್ನು ತಯಾರಿಸಿ ಒ.ಇ.ಸಿ.ಎಫ್. ಸಂಸ್ಥೆ(ಜಪಾನ್)ದಿಂದ ಆರ್ಥಿಕ ನೆರವು ಪಡೆಯಲು ಸರ್ಕಾರದಿಂದ ಸಲ್ಲಿಸಲಾಗಿತ್ತು. ಆದರೆ ಒ.ಇ.ಸಿ.ಎಫ್.ಸಂಸ್ಥೆಯಿಂದ ಆರ್ಥಿಕ ನೆರವು ದೊರೆಯದಿದ್ದ ಕಾರಣ ಯೋಜನೆಗೆ ಹುಡ್ಕೋ ಅಥವಾ ಇತರ ಸಂಸ್ಥೆಯಿಂದ ಆರ್ಥಿಕ ನೆರವು ಪಡೆಯುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಈ ಯೋಜನೆ ಪೂರ್ಣಗೊಂಡ ನಂತರ ನಾಗರೀಕರಿಗೆ ಪ್ರತಿದಿನ ಪ್ರತಿಯೊಬ್ಬರಿಗೆ 135 ಲೀಟರ್ ನೀರನ್ನು ಒದಗಿಸಬಹುದಾಗಿದೆ.

ಶ್ರೀ ಎನ್.ವೈಗೋಪಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಕೊಟ್ಟರುವಂತಹ ಉತ್ತರ ಸಮರ್ಪಕವಾಗಿದ್ದರೂ ಕೂಡ ಚಿತ್ರದುರ್ಗದ ನೀರಿನ ಸಮಸ್ಯೆ ಇದುವರೆಗೂ ಕೂಡ ಯಾವುದೇ ರೀತಿಯಲ್ಲಿ ಬಗೆಹರಿದಿರುವುದಿಲ್ಲ. ಹೀಗಾಗಿ ಈಗಾಗಲೇ ಸರ್ಕಾರದವರು ಸುಮಾರು ನಲವತ್ತೇಳು ಲಕ್ಷದಿಂದ ಐವತ್ತು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಈ ಹಣವನ್ನು ಬಿಡುಗಡೆ ಮಾಡಿದರೂ ಕೂಡ ಯಾವ ರೀತಿಯಲ್ಲೂ ಕೂಡ ಈ ಚಿತ್ರದುರ್ಗದ ಜನತೆಗೆ ಈ ನೀರಿನ ಸಮಸ್ಯೆ ಬಗೆಹರಿದಿಲ್ಲ. ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಈಗಾಗಲೇ ಸರ್ಕಾರದವರು ಜಪಾನ್‌ನ ಒ.ಇ.ಸಿ.ಎಫ್ ಸಂಸ್ಥೆಗೆ 69 ಕೋಟಿ ರೂಪಾಯಿಗಳ ಅಂದಾಜಿನ ಮನವಿಯನ್ನು ಸಲ್ಲಿಸಲಾಯಿತು. ಆದರೆ ಆ ಮನವಿ ಸಫಲವಾಗಲಿಲ್ಲ, ಈಗ ಅದೇ ರೀತಿಯಲ್ಲಿ ಹುಡ್ಕೋ ಅಥವಾ ಇತರೇ ಫೈನಾನ್ಸಿಯಲ್ ಇನ್ಸ್ಟಿಟ್ಯೂಷನ್‌ಗಳಿಂದ ಅರವತ್ತೊಂಭತ್ತು ಕೋಟಿ ರೂಪಾಯಿಗಳ ಅಂದಾಜು ದುಡ್ಡನ್ನು ಬಿಡುಗಡೆ ಮಾಡಿಕೊಂಡು ಭದ್ರಾ ಎಡದಂಡೆ ಕಾಲುವೆಯ ನೀರನ್ನು ಪಡೆದುಕೊಂಡು ಪ್ರತಿ ದಿವಸ 4.50 ದಶಲಕ್ಷ ನೀರನ್ನು ಸರಬರಾಜು ಮಾಡುವ ಯೋಜನೆಯನ್ನು ರೂಪಿಸಿಕೊಂಡಿದ್ದರ ಬಗ್ಗೆ ಸಚಿವರು

ಹೇಳಿದ್ದಾರೆ. ಈ ಒಂದು ವ್ಯವಸ್ಥೆ ಅಷ್ಟು ಸುಲಭವಾಗಿ ಆಗುವುದಿಲ್ಲವೆಂದು ಈಗಾಗಲೇ ಜನತೆಗೆ ಮನವರಿಕೆಯಾಗಿರುವುದರಿಂದ ಈ ನೀರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಒಂದೇ ಒಂದು ದಾರಿ ಎಂದರೆ ಈ ಬಗ್ಗೆ ಹಿಂದೆ ಅಧಿಕಾರಿಗಳಲ್ಲಿ, ಸಂಬಂಧಪಟ್ಟ ಸಚಿವರಲ್ಲಿ ಕೂಡ ಮನವಿಯನ್ನು ಮಾಡಿಕೊಂಡಿದ್ದೇವೆ. ಈ ಒಂದು ದಿಶೆಯಲ್ಲಿ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಚೆನ್ನಗಿರಿಯಲ್ಲಿರುವಂತಹ ಸೂಳೆಕೆರೆಯಿಂದ ಭೀಮಸಮುದ್ರದ ಕಡೆಗೆ ಈ ನೀರನ್ನು ಹಾಯಿಸಿಕೊಳ್ಳತಕ್ಕ....

ಅಧ್ಯಕ್ಷರು: ಮಾನ್ಯ ಗೋಪಾಲಕೃಷ್ಣರವರೆ, ನೀವು ಹೊಸ ಸದಸ್ಯರಾಗಿದ್ದೀರಿ, ನೀವು ಪ್ರಶ್ನೆಯನ್ನು ಮೊದಲೇ ಕೇಳಿರುತ್ತೀರಿ. ಅದಕ್ಕೆ ಸರ್ಕಾರ ಉತ್ತರವನ್ನು ಒದಗಿಸಿರುತ್ತದೆ. ಆ ಉತ್ತರದಲ್ಲಿ ನಿಮಗೆ ಏನಾದರೂ ಅನುಮಾನವಿದ್ದರೆ ನೀವು ಅವರಲ್ಲಿ ಉಪ ಪ್ರಶ್ನೆಯನ್ನು ಕೇಳಬೇಕು. ಇದೆಲ್ಲಾ ಒಂದು ನಿಮಿಷದಲ್ಲಿ ಮುಗಿದುಹೋಗಬೇಕು. ನಮಗೆ ಒಂದು ದಿವಸಕ್ಕೆ 15 ಪ್ರಶ್ನೆಗಳು ಇರುತ್ತದೆ. ಒಂದು ಪ್ರಶ್ನೆಗೆ ನಾಲ್ಕು ನಿಮಿಷಗಳಿರುತ್ತವೆ. ನೀವು ಉತ್ತರವನ್ನು ಪಡೆಯುವಂಥಾದ್ದು, ಅವರು ಹೇಳುವಂಥಾದ್ದು ಎಲ್ಲಾ ಸೇರಿರುತ್ತದೆ. ಆದುದರಿಂದ ನಿಮಗೆ ಏನಾದರೂ ಅನುಮಾನವಿದ್ದರೆ ಅದನ್ನು ಒಂದು ಲೈನ್‌ನಲ್ಲಿ ಪ್ರಶ್ನೆಯ ರೂಪದಲ್ಲಿ ಕೇಳಿ.

ಶ್ರೀ ಎನ್.ವೈ.ಗೋಪಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ಈಗ ಹುಡ್ಕೋ ಅಥವಾ ಇತರೆ ಫೈನಾನ್ಸ್ ಇನ್ಸ್‌ಟ್ಯೂಷನ್‌ಗಳಿಂದ ದುಡ್ಡು ಬಿಡುಗಡೆ ಮಾಡಿಕೊಂಡು ಈ ನೀರಿನ ಸಮಸ್ಯೆಯನ್ನು ಬಗೆಹರಿಸುತ್ತೇವೆಂದು ಮಾನ್ಯ ಸಚಿವರು ಹೇಳಿದ್ದಾರೆ. ಈಗ ನಮ್ಮ ಸಮಸ್ಯೆ ಏನೆಂದರೆ ಚೆನ್ನಗಿರಿಯಲ್ಲಿರುವಂತಹ ಸೂಳೆಕೆರೆಯಿಂದ ನೀರನ್ನು ಹಾಯಿಸಿಬಿಟ್ಟರೆ, ಭೀಮ ಸಮುದ್ರದ ನೀರನ್ನು ಹಾಯಿಸಿಕೊಂಡು ಅಲ್ಲಿಂದ ಪಂಪ್ ಲಿಫ್ಟ್ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

MR. SPEAKER: Very good. That is correct. ಸೂಳೆಕೆರೆ ಎಂದರೆ ಶಾಂತಿಸಾಗರವೆನ್ನುತ್ತಾರಲ್ಲಾ, ಅಲ್ಲಿಂದ ಅವರು ಕೇಳುವುದು.

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಅಧ್ಯಕ್ಷರೆ, ನಾವು ಈಗ ಹಿರಿಯೂರಿನ ವೇದಾವತಿ ನದಿಯಿಂದ ಸುಮಾರು 40 ಕಿ.ಮೀ. ದೂರದಿಂದ 2 ಎಂ.ಬಿ.ಡಿ. ನೀರನ್ನು ತರುತ್ತಿದ್ದೇವೆ. ಈ 2 ಎಂ.ಬಿ.ಡಿ. ನೀರಿನಲ್ಲಿ 1.3 ಎಂ.ಬಿ.ಡಿ. ನೀರು ಮಾತ್ರ ತಲುಪುತ್ತಿದೆ. ಇನ್ನು ಮಿಕ್ಕ ನೀರನ್ನು ಸರಬರಾಜು ಮಾಡುವುದಕ್ಕೆ ಪಂಪ್‌ಗಳ ರೀಪ್ಲೇಸ್ ಮಾಡುವ ಕಾರ್ಯವೆಲ್ಲವನ್ನು ಮಾಡಿದ್ದೇವೆ. ಮಾನ್ಯ ಸದಸ್ಯರು ಹೇಳುವಂಥಾದ್ದು ಬೇರೆ ಯೋಜನೆ ಅಂದರೆ ಶಾಶ್ವತವೆಂದರೆ ಸಂತೆಬೆನ್ನೂರು ಹತ್ತಿರ ತುಂಗಾಭದ್ರಾ ಎಡದಂಡೆಯ ಮೂಲಕ ನೀರನ್ನು ತೆಗೆದುಕೊಳ್ಳುವಂಥಾದ್ದು ಅದು 60 ಕಿ.ಮೀ. ಆಗುತ್ತದೆ. ಅದರಲ್ಲಿ ಇವತ್ತು 69 ಕೋಟಿ ರೂಪಾಯಿಗಳಿಗೆ ಯೋಜನೆಯನ್ನು ಮಾಡಿ ಒ.ಇ.ಸಿ.ಎಫ್‌ಗೆ ಪ್ರಪೋಸ್ ಮಾಡಿದ್ದೆವು. ಅವರು ಈಗ ಹುಡ್ಕೋದಲ್ಲಿ ತೆಗೆದುಕೊಳ್ಳಿ ನಾವು

ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದಮೇಲೆ ಈಗ ಈ ಯೋಜನೆ ಹುಡ್ಕೋದ ಮುಂದೆ ಪ್ರಪೋಸ್ ಮಾಡಿ ಅವರಿಂದ ಆರ್ಥಿಕ ನೆರವನ್ನು ಪಡೆದು ಈ ಕಾರ್ಯವನ್ನು ಮಾಡಬೇಕೆಂದು ನಾವು ತೀರ್ಮಾನ ಮಾಡಿದ್ದೇವೆ. ಅಲ್ಲಿ ನೀರಿನ ವ್ಯವಸ್ಥೆಯನ್ನು ಸರಿಪಡಿಸುವ ದೃಷ್ಟಿಯಿಂದ ಈಗಾಗಲೇ ಸರ್ಕಾರದವರು ತಿಳಿಸಿದ ಎರಡು ಕಡೆಗಳಲ್ಲಿ ಪಂಪ್ ಸ್ಟೇಷನ್‌ಗಳ ಪಂಪ್‌ಗಳನ್ನು ಬದಲಾಯಿಸುವಂಥಾದ್ದು ಅಕ್ಟೋಬರ್ ತಿಂಗಳ ಹೊತ್ತಿಗೆ 2 ಎಂ.ಬಿ.ಡಿ.ನೀರು ತಲುಪುವಂತೆ ಮಾಡುತ್ತೇವೆ. ಇನ್ನು ಅಲ್ಲಿ 270ಕೊಳವೆ ಬಾವಿಗಳು ಆ ಊರಿನಲ್ಲಿದೆ, 165 ಕೈ ಪಂಪ್‌ಗಳು ಇದೆ, 105 ಕೊಳವೆ ಬಾವಿಗಳಿಗೆ ವಿದ್ಯುತ್ ಚಾಲಿತ ಪಂಪ್ ಮಾಡಿದ್ದು, ಸುಮಾರು 2 ಲಕ್ಷ ಗ್ಯಾಲನ್ ನೀರು ಕೊಡುವಂಥಾದ್ದು ಮತ್ತು 5 ಲಕ್ಷ ಗ್ಯಾಲನ್ ಬಾವಿಗಳಿಂದ ಕೊಡುವಂಥಾದ್ದು 2 ಲಕ್ಷ ಗ್ಯಾಲನ್ ನೀರು ಪ್ರತಿನಿತ್ಯ ಸರಬರಾಜು ಮಾಡುವಂಥಾದ್ದು ಎಲ್ಲಾ ಸೇರಿ 2.2 ಎಂ.ಬಿ.ಡಿ.ಯಷ್ಟು ನೀರನ್ನು ಕೊಡುತ್ತಿದ್ದೇವೆ. ಮಾನ್ಯ ಸದಸ್ಯರು ಕೇಳುವಂಥಾದ್ದು ಈಗ 69 ಕೋಟಿ ರೂಪಾಯಿಗಳ ಯೋಜನೆಯನ್ನು ಆದಷ್ಟು ಬೇಗ ಮಾಡಿಕೊಡಿ ಎಂದು ಕೇಳಿದ್ದಾರೆ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ವಿಷಯ: ಭದ್ರಾವತಿಯ ಎಂ.ಪಿ.ಎಂ.ನ ಫಾರೆಸ್ಟ್ ವಾಚರ್ಸ್ ಕುರಿತು.

490 (3790)

ಶ್ರೀ ಆಯನೂರು ಮಂಜೂನಾಥ್ (ಹೊಸನಗರ): ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭದ್ರಾವತಿಯ ಎಂ.ಪಿ.ಎಂ.ನಲ್ಲಿರುವ ಫಾರೆಸ್ಟ್ ವಾಚರ್ಸ್‌ಗಳ ಸಂಖ್ಯೆ ಎಷ್ಟು; ಎಲ್ಲೆಲ್ಲಿ ಎಷ್ಟು ಜನರಿದ್ದಾರೆ;

ಆ) ಇವರಿಗೆ ಕನಿಷ್ಟವೇತನ ಕಾಯ್ದೆ ಅನ್ವಯವಾಗುತ್ತದೆಯೇ; ಹಾಗಿದ್ದರೆ ಯಾವಾಗಿನಿಂದ ಅನ್ವಯವಾಗುತ್ತಿದೆ; ಇವರಿಗೆ ಕನಿಷ್ಟ ವೇತನವನ್ನು ಪಾವತಿಸಲಾಗುತ್ತಿದೆಯೇ; ಇಲ್ಲವಾದಲ್ಲಿ ಕನಿಷ್ಟವೇತನ ಅಧಿಸೂಚನೆ ಪ್ರಕಟಣೆಯಾದ ದಿನಾಂಕದಿಂದ ನೀಡಲಾಗುವುದೇ; ಇಲ್ಲದಿದ್ದಲ್ಲಿ ಯಾವಾಗ ನೀಡಲಾಗುವುದು?

ಶ್ರೀ ಆರ್.ವಿ.ದೇಶ್‌ಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು).

ಅ) ಎಂ.ಪಿ.ಎಂ. ಅರಣ್ಯ ವಿಭಾಗವು ತನ್ನ ಕ್ರೋಢೀಕರಿಸಿದ ಪಟ್ಟಿಯಲ್ಲಿ ಈ ಮುಂದಿನಂತೆ ಒಟ್ಟು 634 ಫಾರೆಸ್ಟ್ ಫೀಲ್ಡ್ ವಾಚರ್ಸ್‌ಗಳನ್ನು ಹೊಂದಿದೆ.